ಹರಳು ಹರಳಾದಂಥ ಮಂಜು



ಬ್ರಹ್ಮ ದೇವಾಲಯ





ಚಾರಣ ತಂಡದ ಟೆಂಟ್



ಮಂಜಿನಲ್ಲಿ ಕಾಲು ಹೂತು ಹೋದ ಕ್ಷಣ

ಈ ಲೋಹಜಂಗ್ ಹಿಮಾಲಯದ ತಪ್ಪಲಿನ ಒಂದು ಪುಟ್ಟ ಗ್ರಾಮ. ಇದುವೇ ನಮ್ಮ ಚಾರಣದ ಬೇಸ್ ಕ್ಯಾಂಪ್. ಇಡೀ ದಿನ ಪ್ರಯಾಣದ ನಂತರ ದಣಿದ ನಮ್ಮ ದೇಹಗಳಿಗೆ ರಾತ್ರಿಯ ಊಟವನ್ನು ಮುಗಿಸಿ ಹಾಸಿಗೆಗೆ ತಲೆಯಿಡುತ್ತಿದ್ದಂತೆಯೇ ನಿದ್ದೆ ಆವರಿಸಿತ್ತು. ಇದು ನಮ್ಮ ಚಾರಣದ ಕೊನೆಯ ಹಾಸಿಗೆ ಮೇಲಿನ ನಿದ್ದೆಯಾಗಿತ್ತು, ಮರುದಿನದಿಂದ ಇನ್ನೂ ನಾಲ್ಕು ದಿನ ನಮ್ಮ ವಾಸ ಟೆಂಟ್‌ನ ಸ್ಲೀಪಿಂಗ್ ಬ್ಯಾಗ್‌ನಲ್ಲಿಯೇ!

ಮುಂಜಾನೆ 7 ಗಂಟೆಗೆ ಶುರುವಾದ ಚಾರಣದಲ್ಲಿ ಪರ್ವತವನ್ನು ಸುತ್ತುವರೆಯುತ್ತಾ ಸಾಗುತ್ತಿದ್ದ ನಮಗೆ ಅಲ್ಲಲ್ಲಿ ದೂರದಲ್ಲೆಲ್ಲೋ ಕಾಣುವ ಪುಟ್ಟ ಪುಟ್ಟ ಹಳ್ಳಿಗಳು, ಅಲ್ಲಿನ ಮನೆಗಳಿಂದ ಏಳುತ್ತಿರುವ ಬಿಳಿ ಹೊಗೆ ಯಾವುದೋ ಸ್ವಪ್ನಲೋಕದ ದೃಶ್ಯದಂತೆ ತೋರುತ್ತಿತ್ತು. ಸುಮಾರು 2 ಗಂಟೆಗಳು ನಡೆದ ನಂತರ ಒಂದು ಸರೋವರ ದೊರೆಯಿತು. ಅಲ್ಲಿ ಕೊಂಚ ವಿಶ್ರಮಿಸಿ, ನಮ್ಮ ಬಾಟಲಿಗಳಿಗೆಲ್ಲಾ ನೀರನ್ನು ತುಂಬಿಕೊಂಡು ಕೊಂಚ ಮುಂದೆ ಸಾಗಿ ಬಲಕ್ಕೆ ತಿರುಗಿ ಹೊರಟಾಗ ನಾವಾಗಲೇ ಕಾಡನ್ನು ಪ್ರವೇಶಿಸಿದ್ದೆವು.

ಅದೊಂದು ಓಕ್ ಮರಗಳಿಂದ ತುಂಬಿದ್ದ ಕೋನಿಫೆರಸ್ ಕಾಡು. ಇನ್ನೂ ಕೊಂಚ ದೂರ ಸಾಗಿದ ಮೇಲೆ ನಮಗೆ ದೊರೆಯುವುದು ಮತ್ತೊಂದು ಸರೋವರ ಬೇಖಾಲ್ ತಾಲ್. ಇದು ಸಮುದ್ರ ಮಟ್ಟದಿಂದ 9000 ಅಡಿ ಎತ್ತರದಲ್ಲಿದೆ. 'ತಾಲ್' ಎಂದರೆ ಉತ್ತರಾಖಂಡದ ಗರ್ವಾಲಿ ಭಾಷೆಯಲ್ಲಿ ಸರೋವರ ಎಂದರ್ಥ. ಈ ಸರೋವರದ ದಂಡೆಯಲ್ಲೇ ನಮ್ಮ ಈ ದಿನದ ಬಿಡಾರ. ನಾವಲ್ಲಿಗೆ ತಲುಪಿದಾಗ ಇನ್ನೂ ಕತ್ತಲಾಗಿರಲಿಲ್ಲ. ಅಷ್ಟರಲ್ಲಿಯೇ ನಮ್ಮ ಗೈಡ್ ಕತ್ತಲಾಗುವುದರೊಳಗೆ ಒಣಗಿದ ಸೌದೆಯನ್ನು ಸಂಗ್ರಹಿಸಲು ಹೇಳಿದ. ಏಕೆಂದರೆ ರಾತ್ರಿಯಾದೊಡನೆ ಅಲ್ಲಿನ ತಾಪಮಾನ ತುಂಬಾ